ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ (ಸಿಸಿಹೆಚ್ -1) ರವರ ನ್ಯಾಯಾಂಗಣದಲ್ಲಿ

ಎಸ್.ಸಿ. ಸಂಖ್ಯೆ: 308/2021

ಚಾ.ಸಾ.- 7 ಫ್ರಾಸಾ.- 4

ದಿಃ 13.03.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರು | ಯಾಸಿನ್ ಭಗವಾನ್ |
| ತಂದೆ ಹೆಸರು | ಹುಸೇನ್ ಸಾಬ್ |
| ವಯಸ್ಸು | 34 ವರ್ಷ |
| ವೃತ್ತಿ | ಪಿ.ಸಿ.12658 |
| ವಿಳಾಸ | ನಾಗರಭಾವಿ, ಬೆಂಗಳೂರು |

ಮುಖ್ಯವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ

ನಾನು ಜನವರಿ 2012 ರಿಂದ ಆಗಸ್ಟ್2021 ರವರೆಗೆ ಜೆ.ಜೆ.ನಗರ ಪೋಲಿಸ್ ಠಾಣೆಯಲ್ಲಿ ಪೋಲೀಸ್ ಕಾನ್ ಸ್ಟೇಬಲ್ ಆಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 3.9.2020 ರಂದು ಚಾ.ಸಾ-11 ರವರು ನನ್ನನ್ನು ಹಾಗು ಚಾ.ಸಾ-6 ರವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದ 1 ನೇ ಆರೋಪಿಯನ್ನು ಪತ್ತೆ ಮಾಡಿ ಅವರ ಮುಂದೆ ಹಾಜರುಪಡಿಸುವ ಕರ್ತವ್ಯಕ್ಕೆ ನೇಮಿಸಿದ್ದರು. ಅದರಂತೆ ನಾನು ಮತ್ತು ಚಾ.ಸಾ-6 ರವರು ಬಾತ್ಮಿದಾರರ ಮೂಲಕ 1 ನೇ ಆರೋಪಿಯು ವಿ.ಎಸ್. ಗಾರ್ಡನ್ ನಲ್ಲಿರುವ ಅಂಬೇಡ್ಕರ್ ಭವನದ ಬಳಿ ಇರುವ ಬಗ್ಗೆ ಮಾಹಿತಿಯನ್ನು ಪಡೆದು ಅದೇ ದಿನ ಸಂಜೆ 6 ಗಂಟೆಗೆ 1 ನೇ ಆರೋಪಿಯನ್ನು ವಶಕ್ಕೆ ಪಡೆದಿರುತ್ತೇವೆ. ಬಳಿಕ ನಾವು 1 ನೇ

ಆರೋಪಿಯನ್ನು ಠಾಣೆಗೆ ಕರೆತಂದು ಸಂಜೆ 6.15 ರ ವೇಳೆಗೆ ಒಂದು ವರದಿಯೊಂದಿಗೆ ಚಾ.ಸಾ-11 ರವರ ಮುಂದೆ ಹಾಜರುಪಡಿಸಿರುತ್ತೇವೆ. ಈಗ ನನಗೆ ತೋರಿಸಿರುವ ದಾಖಲೆಯು ಸಂಬಂಧಿತ ವರದಿಯಾಗಿದೆ. ಇದನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಇದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು.

3. ಸಂಬಂಧಿತ ದಿನದಂದು ನಾವು ವಶಕ್ಕೆ ಪಡೆದಿದ್ದ 1 ನೇ ಆರೋಪಿಯನ್ನು ಗುರುತಿಸಬಲ್ಲೆ. ಸದರಿ ವ್ಯಕ್ತಿಯು ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಾರೆ.

2 ನೇ ಆರೋಪಿ ಪರ ವಕೀಲರು ತಮ್ಮ ಪರ ಪಾಟಿಸವಾಲು ಇಲ್ಲ ಎಂದು ನುಡಿದಿರುತ್ತಾರೆ.

1 ನೇ ಆರೋಪಿ ಪರ ವಕೀಲರು ಗೈರುಹಾಜರಾಗಿರುತ್ತಾರೆ. 1 ನೇ ಆರೋಪಿ ತಾನು ಸಾಕ್ಷಿಯನ್ನು ಪಾಟಿಸವಾಲಿಗೆ ಒಳಪಡಿಸುವುದಿಲ್ಲ ಎಂದು ಹೇಳಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.